ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/02/ಇಸಿಎಸ್(3)/2024

ಆಯುಕ್ತರವರ ಕಛೇರಿ.
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದಿನಾಂಕ:30.11.2024

**ಸುತ್ತೋಲೆ**

ವಿಷಯ: ಆಟಿಸಂ ಸಮಸ್ಯೆಯಿಂದ ಬಳಲುತ್ತಿರುವ ವಿದ್ಯಾರ್ಥಿಗಳು ಡಿಪ್ಲೋಮ ಪರೀಕ್ಷೆಗಳನ್ನು ಬರೆಯಲು Adult prompter ನ್ನು ನೇಮಿಸಿಕೊಳ್ಳುವ ಬಗ್ಗೆ.

••••••

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿರುವ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್ ಗಳಲ್ಲಿ ಭೋದಿಸಲಾಗುತ್ತಿರುವ ಡಿಪ್ಲೋಮಾ ಇಂಜಿನಿಯರಿಂಗ್ ಕೋರ್ಸ್ ಪರೀಕ್ಷೆಯನ್ನು ತಾಂತ್ರಿಕ ಪರೀಕ್ಷಾ ಮಂಡಳಿ ವತಿಯಿಂದ ನಡೆಸಲಾಗುತ್ತಿದೆ.

ವಿಭಿನ್ನ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳಲ್ಲಿ ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ (ASD) ಕೂಡ ಒಂದು ಪ್ರಕಾರವಾಗಿದೆ. ಇಂತಹ ಮಕ್ಕಳು ಮೆದುಳಿನ ಅಸಮರ್ಥತೆಯಿಂದಾಗಿ ತಮ್ಮ ಭಾವನೆಗಳು ಮತ್ತು ತಿಳುವಳಿಕೆಯನ್ನು ವ್ಯಕ್ತಪಡಿಸಲು ಅಸಮರ್ಥರಾಗಿರುತ್ತಾರೆ. ಈ ಮಕ್ಕಳಲ್ಲಿ ನರಮಂಡಲದ ಬೆಳವಣಿಗೆಯಲ್ಲಿನ ನ್ಯೂನತೆ, ಸಂವಹನ ಮತ್ತು ಅಭಿವ್ಯಕ್ತಿ ಸಾಮರ್ಥ್ಯದ ಕೊರತೆ, ದುರ್ಬಲ ಸಾಮಾಜಿಕ ಕೌಶಲ್ಯ, ಸಾಮಾಜಿಕ ಸಂವಹನದ ಕೊರತೆ, ಉದ್ವಿಗ್ನನತೆಗೆ ಒಳಗಾಗುವುದು, ಇತರೆ ಮಕ್ಕಳೊಂದಿಗೆ ಬೆರೆಯದಿರುವುದು, ಮಂದಗತಿಯ ಮಾತುಗಾರಿಕೆ, ಪದಗಳ ಪರಿಚಯವಿಲ್ಲದಿರುವಿಕೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಡಿಪ್ಲೋಮಾ ಇಂಜಿನಿಯರಿಂಗ್ ಕೋರ್ಸ್ ಪರೀಕ್ಷೆಗಳಿಗೆ ಹಾಜರಾಗುವ ವಿಭಿನ್ನ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಡಿಪ್ಲೋಮ-ಇಂಜಿನಿಯರಿಂಗ್ ಕೋರ್ಸ್ ಪರೀಕ್ಷೆಗೆ ಹಾಜರಾಗುವ ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ (ASD) ಹೊಂದಿರುವ ಮಕ್ಕಳಿಗೆ ಪ್ರತ್ಯೇಕ ಕೊಠಡಿ ಹಂಚಿಕೆ ಮಾಡಿ, ಪರೀಕ್ಷೆ ಬರೆಯುವ ಸಂದರ್ಭದಲ್ಲಿ ನಿಷ್ಕ್ರಿಯೆಗೊಳ್ಳದಂತೆ ಕ್ರಮಕೈಗೊಂಡು ಪರೀಕ್ಷೆಯಲ್ಲಿ ಉತ್ತಮವಾಗಿ ಬರೆಯಲು ಅನುವು ಮಾಡಿಕೊಡಬೇಕಾಗಿದೆ. ಇಂತಹ ಕೊಠಡಿಗಳಲ್ಲಿ "ವಯಸ್ಕ ಪ್ರೋತ್ಸಾಹಕ (Adult prompter) ಆಗಿ ವಿದ್ಯಾರ್ಥಿಯ ಶಿಕ್ಷಕರು/ಪರಿಚಿತವಿರುವ ವಯಸ್ಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಮುಂದುವರೆದು, ವಿದ್ಯಾರ್ಥಿಯು ಆಟಿಸಂ ಸಮಸ್ಯೆ ಹೊಂದಿರುವ ಬಗ್ಗೆ ವೈದ್ಯಕೀಯ ಪ್ರಮಾಣಪತ್ರವನ್ನು ಸಂಸ್ಥೆಯ ಪ್ರಾಂಶುಪಾಲರು ಪಡೆದು ಸದರಿ ಪ್ರಮಾಣ ಪತ್ರವನ್ನು ತಾಂತ್ರಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿ ರವರಿಗೆ ಸಲ್ಲಿಸಿ ಅನುಮತಿಯನ್ನು ಪಡೆದು ಹೆಚ್ಚುವರಿ ಸಮಯ ಹಾಗೂ ಪ್ರತ್ಯೇಕ ಪರೀಕ್ಷಾ ಕೊಠಡಿ ವ್ಯವಸ್ಥೆ ಮಾಡುವುದು.

ನೇಮಕಗೊಂಡ Adult prompter ಪರೀಕ್ಷಾ ಕೊಠಡಿಯಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳು:

1. ಪರೀಕ್ಷಾ ಕೊಠಡಿಯ ವಾತಾವರಣವು ಯಾವುದೇ ಗದ್ದಲವಿಲ್ಲದೆ ಪ್ರಶಾಂತವಾಗಿರುವಂತೆ ಕ್ರಮವಹಿಸುವುದು.
2. ಮಕ್ಕಳ ಪರೀಕ್ಷಾ ಕೊಠಡಿಯಲ್ಲಿ ಮಕ್ಕಳು ಪರೀಕ್ಷೆ ಬರೆಯುವ ಸಂದರ್ಭದಲ್ಲಿ ಮಕ್ಕಳ ಗಮನವು ನಿಷ್ಕ್ರಿಯಗೊಳ್ಳದಂತೆ/ಬೇರೆಡೆಗೆ ಹೋಗದಂತೆ ಗಮನಹರಿಸುವುದು.

3. ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಪ್ರಶ್ನೆಯನ್ನು ಓದಲು, ಉತ್ತರಿಸಲು ಹಾಗೂ ಮುಂದಿನ ಪ್ರಶ್ನೆಗೆ ಉತ್ತರಿಸಲು ಗಮನವನ್ನು ಸೆಳೆದು ಅಗತ್ಯ ಮಾರ್ಗದರ್ಶನ ನೀಡುವುದು.
4. ವಿದ್ಯಾರ್ಥಿಯ ಮಾರ್ಗದರ್ಶಕರಾಗಿ ನೇಮಕಗೊಂಡಿರುವ prompter/ಪ್ರೋತ್ಸಾಹಕರು ಯಾವುದೇ ಕಾರಣಕ್ಕೂ ವಿದ್ಯಾರ್ಥಿಗೆ ಉತ್ತರವನ್ನು ಹೇಳುವುದಾಗಲೀ ಅಥವಾ ಉತ್ತರವನ್ನು ಸ್ವತಃ ಬರೆಯುವುದಾಗಲೀ ಮಾಡದಂತೆ ಎಚ್ಚರಿಕೆ ವಹಿಸುವುದು.

ಮೇಲಿನ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಅನುಪಾಲನೆ ಮಾಡಿ, ಆಟಿಸಂ ಸಮಸ್ಯೆ ಹೊಂದಿರುವ ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಯಾವುದೇ ಆತಂಕ ಮತ್ತು ಗೊಂದಲಕ್ಕೆ ಒಳಗಾಗದೇ ಸುಲಲಿತವಾಗಿ ಪರೀಕ್ಷೆ ಬರೆಯಲು ಅನುಕೂಲವಹಿಸುವಂತೆ ಎಲ್ಲಾ ಅಗತ್ಯ ಕ್ರಮವಹಿಸಲು ಸೂಚಿಸಲಾಗಿದೆ.

Manjula

ಆಯುಕ್ತರು

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರುಗಳಿಗೆ-ಮುಂದಿನ ಕ್ರಮಕ್ಕಾಗಿ

ಪ್ರತಿ:

1) ಆಯುಕ್ತರ ಆಪ್ತ ಶಾಖೆ
2)ನಿರ್ದೇಶಕರ ಆಪ್ತ ಶಾಖೆ
3) ಕಾರ್ಯದರ್ಶಿಗಳು ತಾಂತ್ರಿಕ ಪರೀಕ್ಷಾ ಮಂಡಳಿ ಆಪ್ತ ಶಾಖೆ
4)ಇ -ಗವರ್ನೆನ್ಸ್- ವೆಬ್ ಸೈಟ್ ನಲ್ಲಿ ಪ್ರಕಟಿಸಲು
5)ಕಛೇರಿ ಪ್ರತಿ